# ಡಾ. ಮಧುರಾಣಿ ಗೌಡ

M.COM ,MBA,DST,DC,Ph.D,



**ಸಮಾಲೋಚನೆ (ಕೌನ್ಸಲರ್) ಯುವ ಕಾರ್ಯಕರ್ತರು ಹಾಗೂ ಪರಿವರ್ತನಾ ತರಬೇತುದಾರರು ಗೌರವಾನ್ವಿತ ನಾಡಪ್ರಭು ಕೆಂಪೆಗೌಡ ಪ್ರಶಸ್ತಿ ಪುರಸ್ಕೃತರು**

★ ★ ★ ★ ★

ಡಾ. ಮಧುರಾಣಿ ಗೌಡರವರು ಸುಮಾರು ಎರಡು ದಶಕಗಳಿಂದ ಶಿಕ್ಷಣ ಹಾಗೂ ಸಮಾಜಸೇವಾ ಕ್ಷೇತ್ರದಲ್ಲಿ ನಿರಂತರವಾಗಿ ಸೇವೆ ಸಲ್ಲಿಸುತ್ತ ಬಂದಿರುತ್ತಾರೆ. ಇವರು ಈ ಕೆಳಕಂಡ ಸಂಸ್ಥೆಗಳಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡು ಸಮಾಜದ ಸುಧಾರಣೆಯತ್ತ ಕಾರ್ಯನಿರ್ವಹಿಸುತ್ತಿದ್ದಾರೆ:

1. ಮ್ಯಾನೇಜಿಂಗ್ ಪಾರ್ಟ್ನರ್ ಹಾಗೂ ಪರಿವರ್ತನಾ ತರಬೇತುದಾರರು– ಕ್ವೀನ್ಸ್ ಗ್ಲೋಬಲ್ ಮ್ಯಾನೇಜ್ಮೆಂಟ್ಸೆಲ್ಯುಷನ್ಸ್
2. ಸಂಸ್ಥಾಪನಾ ಅಧ್ಯಕ್ಷರು – ವಿಶ್ವಮಾನವ ಯುವ ವೇದಿಕೆ
3. ಮಾಜಿ ಅಧ್ಯಕ್ಷರು ಹಾಗೂ ಮೆಂಟರ್ – ರೋಟರಿ ಕ್ಲಬ್ ಜಯನಗರ
4. ನಿರ್ದೇಶಕರು – ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ
5. ಮ್ಯಾನೇಜಿಂಗ್ ಕಮಿಟಿ ಸದಸ್ಯರು – ಬೆಂಗಳೂರು ಮ್ಯಾನೇಜ್ಮೆಂಟ್ ಅಸೋಸಿಯೇಷನ್
6. ಹಿರಿಯ ಸಮಾಲೋಚಕರು – ಸಮಾಧಾನ ಕೌನ್ಸಿಲಿಂಗ್ ಸೆಂಟರ್

ಇವರ ಎರಡು ದಶಕದ ಸಾಧನೆಗಳು ಇಂತಿವೆ.

1. ಯುವ ಪೀಳಗೆಯನ್ನು ರಾಷ್ಟ್ರದ ಜವಾಭ್ದಾರಿಯುತ ನಾಗರಿಕರನ್ನಾಗಿ ಪರಿವರ್ತಿಸುವಲ್ಲಿ ಮೇಲುಗೈ ಸಾಧಿಸಿದ್ದಾರೆ
2. ಮಾಧಕ ವಸ್ತುಗಳಿಂದ ಗಹಾಗೂ ಆತ್ಮಹತ್ಯೆಯಿಂದ ಪ್ರೇರೆಪಿತರಾದ ಯುವಕರಿಗೆ ಆಪ್ತ ಸಮಾಲೋಚನೆ ಮೂಲಕ ಅವರನ್ನು ಸರಿದಾರಿಯಲ್ಲಿ ನಡೆಸಲು ಯಶಸ್ವಿಯಾಗಿದ್ದಾರೆ
3. ಹೊಂದಾಣಿಕೆ ಇಲ್ಲದ ದಂಪತಿಗಳಿಗೆ ಆತ್ಮೀಯ ಹಾಗೂ ಆಪ್ತ ಸಮಾಲೋಚನೆ ಮೂಲಕ ಹೊಂದಾಣಿಕೆಯಿಂದ ಬದುಕಲು ನೆರವಾಗಿದ್ದಾರೆ
4. ವ್ಯಕ್ತಿತ್ವ ವಿಕಸನ ತರಬೇತಿಗಳ ಮೂಲಕ ಯುವ ಪೀಳಿಗೆಯನ್ನು ತಮಗಿಷ್ಟವಾದ ನೌಕರಿಗಳನ್ನು ಆರಿಸಲು ಯೋಗ್ಯರನ್ನಾಗಿ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ
5. ಪರಿಸರ ಸ್ವಚ್ಚತೆ ಹಾಗೂ ಉಳಿವಿಗಾಗಿ, ಬಾಲ ಕಾರ್ಮಿಕ ಪದ್ದತಿ ನಿರ್ಮೂಲನೆಗಾಗಿ, ವಿದ್ಯಾರ್ಥಿಗಳು ಪರೀಕ್ಷೆಯ ಬಗ್ಗೆ ಭಯಮುಕ್ತರಾಗುವಲ್ಲಿ ಹಾಗೂ ಇತರೆ ಸಮಾಜಮುಕಿ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುತ್ತ ಬಂದಿದ್ದಾರೆ
6. ಮಹಿಳೆಯರು ಸ್ವಾವಲಂಭಿಗಳಾಗಲು ಅವರನ್ನು ಸಭಲೀಕರಿಸಿ ಸೂಕ್ತ ಮಾರ್ಗದರ್ಶನ ಮೂಲಕ ನೆರವು ನೀಡುತ್ತಾ ಬಂದಿದ್ದಾರೆ

★ ವಿಶ್ವಮಾನವ ಯುವ ವೇದಿಕೆ ಹಾಗೂ ಕ್ವೀನ್ಸ್ ಗ್ಲೋಬಲ್ ಮ್ಯಾನೇಜ್‌ಮೆಂಟ್ ಸೆಲ್ಯೂಷನ್ಸ್‌ನ ಸಂಯುಕ್ತಾಶ್ರಮದಲ್ಲಿ ಕೆಳಕಂಡ ಪ್ರಮುಖ ವಾರ್ಷಿಕ ಕಾರ್ಯಕ್ರಮಗಳನ್ನು ನಡೆಸಿಕೋಂಡು ಬಂದಿರುತ್ತಾರೆ

1. ರಾಜ್ಯ ಮಟ್ಟದ ವಾರ್ಷಿಕ ಸೆಮಿನಾರ್ :" ದೇಶಕ್ಕಾಗಿ ಪರಿವರ್ತನೆ– ಭಾರತದ ಅಭಿವೃದ್ದಿಯೆಡೆಗೆ ವೈಯುಕ್ತಿಕ ಕೊಡುಗೆ"_ ಈ ಸೆಮಿನಾರ್ ಡಾ. ಮಧುರಾಣಿರವರ ಮೆದುಳಿನ ಕೂಸಾಗಿದ್ದು 2012 ರಿಂದ ಬೆಂಗಳೂರಿನ ಐತಿಹಾಸಿಕ ಟೌನ್‌ಹಾಲ್‌ನಲ್ಲಿ ಆಯೋಜಿಸಲಾಗುತ್ತಿದೆ
2. ಈಸೆಮಿನಾರ್‌ಗೆ ಬೆಂಗಳೂರನ್ನೊಳಗೊಂಡು ರಾಜ್ಯದ ಹಲವು ಭಾಗಗಳಿಂದ ವಿದಾರ್ಥಿ ವಿಧ್ಯಾರ್ಥಿನಿಯರು ಹಾಗೂ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ (650 ರಿಂದ 700) ಭಾಗವಹಿಸುತ್ತಿರುತ್ತಾರೆ

3. ಈ ಕಾರ್ಯಕ್ರಮವು ಯುವ ಜನಾಂಗದಲ್ಲಿ ನಶಿಸುತ್ತಿರುವ ಮೌಲ್ಯಗಳನ್ನು ಮರುಕಳಿಸಿ ಅವರನ್ನು ದೇಶದ ಅಭಿವೃದ್ಧಿಯೆಡೆಗೆಕೊಡುಗೆ ನೀಡುವಂತಹ ಜವಾಬ್ಧಾರಿಯುತ ನಾಗರೀಕರನ್ನಾಗಿಸುವುದರೆಡೆಗೆ ರೂಪಿಸಲಾಗಿರುತ್ತದೆ

4. ಈ ಕಾರ್ತಕ್ರಮದಲ್ಲಿ ಹೆಸರಾಂತ ಹಾಗೂ ತಮ್ಮದೇ ಆದ ಕ್ಷೇತ್ರದಲ್ಲಿ ಸಾಧನೆ ಮಾಡಿ ದೇಶದ ಅಭಿವೃದ್ಧಿಯೆಡೆಗೆ ಶ್ರಮಿಸಿರುವಂತಹ ಭಾಷಣಕಾರರಿಂದ ಪ್ರೇರೆಪಣೆ ಮೂಡಿಸಿ, ಪ್ರಶ್ನೋತ್ತರಕ್ಕೂ ಹಾಗೂ ಪ್ಯಾನಲ್ ಸಂವಾದಕ್ಕೂ ಅವಕಾಶ ಮಾಡಿಕೊಡಲಾಗುತ್ತದೆ. ಇದರಿಂದ ಯುವ ಜನಾಂಗವನ್ನು ದೇಶದ ಹಿತಾಸಕ್ತಿಯ ಬಗ್ಗೆ ಕಾಡುವ ಪ್ರಶ್ನೆಗಳಿಗೆ ಸಮಾಧಾನಕರ ಉತ್ತರ ನೀಡುವ ಪ್ರಯತ್ನವಿರುತ್ತದೆ

5. ಈ ಸೆಮಿನಾರ್‌ನಲ್ಲಿ ಭಾಗವಹಿಸುವವರಿಗೆ ಸಂಪೂರ್ಣ ಉಚಿತವಾಗಿ ಕಾರ್ಯಕ್ರಮ , ಊಟ ಮತ್ತು ಸರ್ಟಿಫಿಕೇಟನ್ನು ನೀಡಲಾಗುತ್ತದೆ

6. ಇದು ಪೂರ್ತಿದಿನದ ಕಾರ್ಯಕ್ರಮವಾಗಿದ್ದು ಯುವ ಜನತೆಯನ್ನು ಆಕರ್ಷಿಸಲು ಸೆಮಿನಾರ್‌ನ ಮದ್ಯದಲ್ಲಿ ಹಲವು ದೇಶಭಕ್ತಿ ಸಾಂಸ್ಕ್ರತಿಕಾರ್ಯಕ್ರಮಗಳನ್ನು ಕೂಡ ಆಯೋಜಿಸಲಾಗಿರುತ್ತದೆ. ಆದ್ದರಿಂದ ಭಾಗವಹಿಸುವ ವಿದ್ಯಾರ್ಥಿವೃಂದ ಕಾರ್ಯಕ್ರಮದ ಅಂತ್ಯದವರೆಗೂ ಇದ್ದು ರಾಷ್ಟಗೀತೆಯನ್ನು ಹಾಡಿ ತೆರಳುತ್ತಾರೆ

★ ರಾಜ್ಯಮಟ್ಟದ ವಾರ್ಷಿಕ “ ಜಾಗತಿಕ ಜಾನಪದ ಹಬ್ಬ “ ಕಾರ್ಯಕ್ರಮ –

‘ ಜಾಗತಿಕ ಕೂಟ ‘ ಎಂದೇ ಪ್ರಸಿದ್ಧವಾಗಿರುವ ನಮ್ಮ ಬೆಂಗಳೂರಿನಲ್ಲಿ ವಿವಿದ ರಾಜ್ಯ ಹಾಗೂ ರಾಷ್ಟ್ರಗಳ ಜನರು ವಾಸವಾಗಿರುವ ನಿಟ್ಟಿನಲ್ಲಿ ನಮ್ಮ ಸಂಸ್ಥೆಯು ‘ ಜಾಗತಿಕ ಜಾನಪದ ಹಬ್ಬ “ ಕಾರ್ಯಕ್ರಮದ ಮೂಲಕ ಈ ವಿಭಿನ್ನ ಜನರ ಜಾನಪದ ಸಂಸ್ಕೃತಿಯನ್ನು ಒಂದೇ ವೇದಿಕೆಯಾದ ರವೀಂದ್ರ ಕಲಾಕ್ಷೇತ್ರದಲ್ಲಿ ಪ್ರದರ್ಷಿಸುವ ವಿಶಿಷ್ಟ ಪ್ರಯತ್ನ ಮಾಡಿದೆ. ಇದರಿಂದ ಇಂದಿನ ಯುವ ಜನಾಂಗದಲ್ಲಿ ತಮ್ಮ ಸಂಸ್ಕೃತಿಯ ಬಗ್ಗೆ ಅಭಿಮಾನ ಹಾಗೂ ಇತರೆ ಸಂಸ್ಕೃತಿಗಳ ಬಗ್ಗೆ ಗೌರವ ಕೂಡ ಹೆಚ್ಚುವುದು. ಈ ಕಾರ್ಯಕ್ರಮದಲ್ಲಿ ಪದವಿ, ವೈದ್ಯಕೀಯ, ಇಂಜನೀಯರಿಂಗ್, ಡಿಪ್ಲೋಮಾ, ವೃತ್ತಿಪರ ವೃತ್ತಿಶಿಕ್ಷಣ ಯುವ ವೇದಿಕೆಗಳು ಮುಂತಾದ ಇತರೆ ಎಲ್ಲಾ ಸಂಸ್ಥೆಗಳು ಪಾಲ್ಗೊಳ್ಳಲು ಮುಕ್ತ ಅವಕಾಶವಿದ್ದು, ಪ್ರತಿಯೊಬ್ಬರಲ್ಲಿರುವ ಪ್ರತಿಭೆಯನ್ನು ಬೆಳಕಿಗೆ ತರುವ ವೇದಿಕೆಯನ್ನು ಕಲ್ಪಿಸಿಕೊಡಲಾಗುತ್ತದೆ. ಈ ಕಾರ್ಯಕ್ರಮದಲ್ಲಿ ಭಗವಹಿಸುವ ಎಲ್ಲರಿಗೂ ಉಚಿತವಾಗಿ ಊಟದ ವ್ಯವಸ್ಥೆ ಮಾಡಲಾಗುತ್ತದೆ, ಭಾಗವಹಿಸಿದ ತಂಡಗಳಿಗೆ ಸರ್ಟಿಫಿಕೇಟ್ ಮತ್ತು ಪ್ರಶಸ್ತಿಗಳನ್ನು ನೀಡಲಾಗುತ್ತದೆ

★ ಕುವೆಂಪು ನಮನ–

ವಿಶ್ವಮಾನವ ಸಂದೇಶವನ್ನು ಜಗತ್ತಿಗೆ ಪರಿಚಯಿಸಿದ ಯುಗದಕವಿ, ಜಗದಕವಿ, ರಸಋಷಿ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಕುವೆಂಪುರವರಿಗೆ, ನಮ್ಮ ವಿಶ್ವಮಾನವ ಯುವ ವೇದಿಕೆಯ ವತಿಯಿಂದ ವಿಚಾರ ಸಂಕಿರಣದ ಮೂಲಕ ನಮನ ಸಲ್ಲಿಸುವ ಪ್ರತೀತಿ ಇದೆ ಈ ಕಾರ್ಯಕ್ರಮವನ್ನು ನಮ್ಮ ಸಂಸ್ಥೆಯು ಬೇರೆ ಸಂಘ ಸಂಸ್ಥೆಗಳ ಜೊತೆಗೂಡಿ ನಡೆಸಲಾಗುತ್ತದೆ. ಈ ವಿಚಾರ ಸಂಕಿರಣದಲ್ಲಿ ಆಯಾ ಸಂಸ್ಥೆಗಳ ನೌಕರರನ್ನು ಪಾಲ್ಗೊಳ್ಳಲು ಪ್ರೇರೇಪಿಸಿ ಅವರಲ್ಲಿ ವಿಶ್ವ ಮಾನವತ್ವದ ಕಿಡಿಯನ್ನು ಹಚ್ಚಿ ಅವರು ತಮ್ಮ ಕೆಲಸಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿಯುತರಾಗಿ ನಡೆದುಕೊಳ್ಳುವಂತೆ ಮಾಡುವ ಪ್ರಯತ್ನ ನಮ್ಮದಾಗಿದೆ ಈ ಮೆಲ್ಕಂಡ ಮೂರು ಪ್ರಮುಖ ವಾರ್ಷಿಕ ಕಾರ್ಯಕ್ರಮಗಳನ್ನು ಹೊರತುಪಡಿಸಿ ಡಾ. ಮಧುರಾಣಿ

ಗೌಡರವರು ವ್ಯಕ್ತಿತ್ವ ವಿಕಸನ, ಜನಜಾಗೃತಿ ಕಾರ್ಯಕ್ರಮಗಳಾದ ಸ್ವಚ್ಛತೆ, ಪರಿಸರ, ಮಾಧಕ ವಸ್ತುಗಳು, ಆತ್ಮಹತ್ಯೆ ಹಾಗೂ ಹೆಚ್. ಐ. ವಿ ಮುಂತಾದ ಮಾರಕ ಹಾಗೂ ಸೂಕ್ಮ ವಿಷಯಗಳ ಬಗ್ಗೆ ನಿರಂತರವಾಗಿ ಜಾಗೃತಿ ಮೂಡಿಸಿ ಸೂಕ್ತ ಸಮಾಲೋಚನೆ ನೀಡುವಲ್ಲಿ ಯಶಸ್ವಿಯಾಗಿದ್ದಾರೆ

★ ಜಯನಗರ ರೋಟರಿಕ್ಲಬ್‌ನ ಅಧ್ಯಕ್ಷರಾಗಿ ಜಯನಗರ ನಿವಾಸಿಗಳ ಕುಂದುಕೊರತೆಗಳನ್ನು ನಿವಾರಿಸುವಲ್ಲಿ ಸಕ್ರೀಯವಾಗಿಪ್ರಯತ್ನಿಸಿ ಹಲವಾರು ನೆರವು ನೀಡಿದ್ದಾರೆ. ಕರೋನ ಸಮಯದಲ್ಲಿ ಉಚಿತವಾಗಿ ಊಟ, ಮಸ್ಕ್, ಸ್ಯಾನಿಟೈಸರ್, ಸ್ಯಾನಿಟರಿಪ್ಯಾಡ್ಸ್, ಫೆಸ್ ಶೀಲ್ಡ್ ನೀಡಿ ಸಹಕರಿಸಿದ್ದಾರೆ.

★ ಆಪ್ತ ಸಮಾಲೋಚಕರು, ಕೌಟುಂಬಿಕ ಸಲಹೆಗರ್ತಿಯಾಗಿ ಮಾದ್ಯಮಗಳ ಹಲವಾರು ಚಿಂತನ ಮಂತನ, ಸಂವಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸೂಕ್ತ ಸಲಹೆಗಳನ್ನು ನೀಡಿರುತ್ತಾರೆ

★ ಸಮಾಜಿಕ ಸಮಸ್ಯೆಗಳಾದ ಆತ್ಮಹತ್ಯೆ ಮಾಧಕ ವಸ್ತು ಸೇವನೆ ಅನ್ಯೆತಿಕ ಸಂಭಂದಗಳು, ಹದಿಹರೆಯದ ವಯಸ್ಸಿನ ಸಮಸ್ಯೆಗಳು ಮುಂತಾದುವುಗಳಿಗೆ ನೇರವಾಗಿ ಹಾಗೂ ಮಾದ್ಯಮಗಳ ಮೂಲಕ ಸಮಾಧಾನ ಹಾಗೂ ಮಾರ್ಗರ್ಧರ್ಶನ ನೀಡಿ ಸಹಕರಿಸಿರುತ್ತಾರೆ

★ ಕರೋನ ಸಮಯದಲ್ಲಿ ಹೆದರಿದ ಸುಮಾರು 250 ಜನರಿಗೆ ಬಿ.ಬಿ.ಎಂ.ಪಿ ಮತ್ತು ರೋಟರಿ ವಾರ್ ರೂಂ ಮೂಲಕ ಸಮಾಲೋಚನೆ ನೀಡಿ, ಧೈರ್ಯ ತುಂಬಿ ಕರೋನದ ಭಯದೀಂದ ಹೊರಬಂದು ಜೀವನವನ್ನು ಎದುರಿಸುವ ಧೈರ್ಯ ನೀಡಿದ್ದಾರೆ

★ ಪರಿವರ್ತನ ತರಬೇತುದಾರರಾಗಿ ಉತ್ಸಾಹದಿಂದ ಹಾಗೂ ಭವೋದ್ರಿಕ್ತರಾಗಿ ಹಲವಾರು ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳನ್ನು ಹಾಗೂ ಕಾರ್ಯಗಾರಗಳನ್ನು ಯಶಸ್ವಿಯಾಗಿ ಆಯೋಜಿಸಿದ್ದಾರೆ

★ ಎಫ್.ಕೆ.ಸಿ.ಸಿ.ಐ ಮತ್ತು ಬಿ.ಎಂ.ಎ ಸಂಸ್ಥೆಗಳಲ್ಲಿ ಚೇರ್‌ಪರ್ಸನ್ ಮತ್ತು ಕೋ-ಚೇರ್ ಆಗಿ ಹಲವಾರು ಕಾರ್ಯಕ್ರಮಗಳನ್ನು ಸಂಸ್ಥೆಯ ನಿಯಮವಾಳಿಗನುಸಾರವಾಗಿ ನಡೆಸಿ ಸಂಸ್ಥೆಯ ಅಭಿವೃದ್ಧಿಯೆಡೆಗೆ ಶ್ರಮಿಸಿರುತ್ತಾರೆ

★ ಇದೆಲ್ಲದರ ಜೊತೆಯಲ್ಲಿ ಅನ್ಯ ಸಂಸ್ಥೆಗಳು ಸಹಾಯಹಸ್ತ ಬಯಸಿದಾಗ, ತಮ್ಮ ಕೈಯಲ್ಲಾದ ಸಹಾಯ ಮತ್ತು ಸಹಕಾರ ನೀಡಿ ಕಾರ್ಯಕ್ರಮದ ಯಶಸ್ಸಿನಲ್ಲಿ ಭಾಗಿಯಾಗಿರುತ್ತಾರೆ.

# ಇವರ ಸೇವೆಗಳನ್ನು ಗುರುತಿಸಿ ದೊರೆತ ಪ್ರಶಸ್ತಿಗಳು :

ಚಾಣಕ್ಯ ರಾಷ್ಟ್ರೀಯ ಪ್ರಶಸ್ತಿ – ತರಬೇತಿ – ಪಬ್ಲಿಕ್ ರಿಲೇಶನ್ಸ್ ಕೌನ್ಸಿಲ್ ಆಫ್ ಇಂಡಿಯಾ – **PRCI - 2024**

ಕಿತ್ತೂರು ರಾಣಿ ಚೆನ್ನಮ್ಮ ಪ್ರಶಸ್ತಿ – ಮೇಘಮೈತ್ರಿ ಕನ್ನಡ ಸಾಹಿತ್ಯ ಸಂಘ **- 2024**

ಕರೋನಾ ವಾರಿಯರ್ ಪ್ರಶಸ್ತಿ – **KASSIA & Weekey India - 2021**

ಚೇಂಜ್ ಮೇಕರ್ ಆಫ್ ದಿ ಇಯರ್ ಪ್ರಶಸ್ತಿ – ರೇಡಿಯೊಸಿಟಿ **91.1 FM - 2020**

ಗೌರವಾನ್ವಿತ "ವಿಶಿಷ್ಟ ಮಹಿಳಾ ವಾಣಿಜ್ಯೋದ್ಯಮಿ (ರಾಷ್ಟ್ರೀಯ) ಪ್ರಶಸ್ತಿ" **- NFED 2019**

ಕನ್ನಡ ಸಾಹಿತ್ಯ ಪರಿಷತ್ತಿನ ಪ್ರತಿಷ್ಠಿತ- ವಿಶ್ವಮಾನವ ಕುವೆಂಪು ಪ್ರಶಸ್ತಿ- ಹೆಬ್ಬಾಳ **- 2019**

"ಮಿಡಿತಾ ಫೌಂಡೇಶನ್‌ನಿಂದ ಗೌರವಾನ್ವಿತ ಪರಿಸರ ಮತ್ತು ಶಿಕ್ಷಣ ರತ್ನ ಪ್ರಶಸ್ತಿ **- 2018**

ಹೆಸರಾಂತ "ವರ್ಷದ ಮಹಿಳಾ ಉದ್ಯಮಿ (ರಾಷ್ಟ್ರೀಯ) ಪ್ರಶಸ್ತಿ" **- NFED 2019**

ಶಿಕ್ಷಣಕ್ಕಾಗಿ ಪ್ರತಿಷ್ಠಿತ ನಾಡಪ್ರಭು ಕೆಂಪೇಗೌಡ (ರಾಜ್ಯ) ಪ್ರಶಸ್ತಿ **- 2016**

ಕರ್ನಾಟಕ ಸಾಂಸ್ಕೃತಿಕ ಅಕಾಡೆಮಿ **- 2013** ರ - ಗೌರವಾನ್ವಿತ ಶಿಕ್ಷಣ ರತ್ನ ಪ್ರಶಸ್ತಿ

****************